**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**
**CC No.619/2023**

**CW -3 PW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಮಹಿಬೂಬ್ |
| ತಂದೆ | ಃ | ಗೋಕುಲ್ ಸಾಬ್ |
| ವಯಸ್ಸು | ಃ | 33 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಖಾನಾಪುರ್ |
| ಪ್ರಮಾಣಿಕರಿಸಿದ ದಿನಾಂಕ | ಃ | **09-01-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ದಿ.30-04-2022 ರಂದು ಬೆಳಿಗ್ಗೆ 11:00 ರಿಂದ 11:30 ರ ಅವಧಿಯಲ್ಲಿ ಪೊಲೀಸರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಮಾತ್ಪಲ್ಲಿ ಸೀಮೆಯಲ್ಲಿನ ಸ.ನಂ.163 ರಲ್ಲಿ ಪೊಲೀಸರು ಪಂಚನಾಮೆಯನ್ನು ಮಾಡಿ ಒಂದು ಜಾಲಿ ಕಟ್ಟಿಗೆ ಮತ್ತು ಒಂದು ಕಲ್ಲನ್ನು ಅಮಾನತು ಪಡಿಸಿಕೊಂಡು ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-2 ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಲಯದ ಮುಂದಿರುವ ಒಂದು ಕಟ್ಟಿಗೆ ಮತ್ತುಕಲ್ಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೆ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು:-</u> ಆರೋಪಿ ಪರ ಶ್ರೀ. ಎಸ್. ಪಿ ವಕೀಲರಿಂದ .**

ನನಗೆ ಓದಲು ಬರೆಯಲು ಬರುತ್ತದೆ. ಪೊಲೀಸರು ಪಂಚನಾಮೆಗೆ ನನ್ನನ್ನು ಖಾನಾಪುರ್ ಗ್ರಾಮದಿಂದ ಕರೆದುಕೊಂಡು ಹೋಗಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ನನ್ನೊಂದಿಗೆ ಅಲಾಂ ಇದ್ದರು ಸದರಿ ಅಲಾಂ ನನ್ನೊಂದಿಗೆ ಖಾನಾಪುರ್ ಗ್ರಾಮದಲ್ಲಿ ಇದ್ದರು. ಗುನ್ಹೆ ಸ್ಥಳದ ಪೂರ್ವಕ್ಕೆ ಗಾಯರಣ ಭೂಮಿ, ಪಶ್ಚಿಮಕ್ಕೆ ಮಾತ್ಪಲ್ಲಿ ರಸ್ತೆ, ಉತ್ತರಕ್ಕೆ ಜಮೀನು, ದಕ್ಷಿಣಕ್ಕೆ ಜಮೀನು ಇರುತ್ತವೆ. ಪಂಚನಾಮೆಗೆ ಒಂದು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದ ಸಂಗತಿಗಳನ್ನು ಓದಿರುತ್ತೇನೆ. ಪಂಚನಾಮೆಯಲ್ಲಿ ಬರೆದ ಸಂಗತಿಗಳು ಗೊತ್ತು. ಗುನ್ಹೆ ಸ್ಥಳದ ಮಾತ್ಪಲ್ಲಿಗೆ ಹೋಗುವ ರಸ್ತೆಯ ಹತ್ತಿರ ಮುದ್ದೆ ಮಾಲುಗಳು ಬಿದ್ದಿದ್ದವು. ಮುದ್ದೇ ಮಾಲು 1 ಮತ್ತು 2 ರಂತಾಹ ಕಟ್ಟಿಗೆ ಮತ್ತು ಕಲ್ಲುಗಳು ಎಲ್ಲಾ ಕಡೆ ದೋರೆಯುತ್ತವೆ ಅಂದರೆ ಸರಿ.

ಚಾಸಾ-1 ಮತ್ತು ಖಾಜಾ ಹುಸೇನ್ ನನ್ನ ಸಂಬಂಧಿಕರು ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಳು ಸುಳ್ಳು ನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. ಚಾಸಾ-1 ಸಂಬಂಧಿಕರು ಅದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.